# ನಿಮ್ಮೊಡನೆ

## ಪುಸ್ತಕ ಪ್ರೀತಿ ಬೆಳೆಸುತ್ತ

ಸ್ಕ್ರೀನ್ ಮುಂದೆ ಕುಳಿತು, ಇಹಪರಗಳನ್ನೆಲ್ಲ ಮರೆಯುತ್ತಿರುವ ಮಕ್ಕಳಲ್ಲಿ ಕಲ್ಪನಾ ಶಕ್ತಿಯೊಂದಿಗೆ ಮನುಜ ಸಹಜವಾದ ಕಾರುಣ್ಯವೂ ಕ್ಷೀಣಿಸುತ್ತಿದೆ. ಮಕ್ಕಳನ್ನು ಮನುಷ್ಯರಾಗಿಸಲು ಪುಸ್ತಕ ಪ್ರೀತಿಯ ಬೀಜ ಬಿತ್ತದಿದ್ದರೆ ನಿಷ್ಕರುಣಿ ತಲೆಮಾರು ಬೆಳೆಸಿದ ದೋಷ ನಮ್ಮದೇ ಆಗುತ್ತದೆ.

ಕಣ್ಮುಂದೆ ಅಪಘಾತವಾದಾಗ, ರಕ್ತಸ್ರಾವವಾದರೆ ಇಂದಿನ ಮಕ್ಕಳು ನಿರ್ಲಿಪ್ತರಾಗಿ ಅದನ್ನು ನೋಡುತ್ತಾರೆ, ಇಲ್ಲವೇ 'ಎಫ್' ಶಬ್ದವನ್ನು ಹೇಳಿ, ಸುಮ್ಮನಾಗುತ್ತಾರೆ. ಅವರಲ್ಲಿ ಮಾನವ ಸಹಜವಾದ ಅನುಭೂತಿ, ಅನುಕಂಪ ಮೂಡುವುದೇ ಇಲ್ಲ.

ಸ್ಕ್ರೀನ್ ಮುಂದೆ ಕಣ್ಣು ನೆಟ್ಟು ಕೂರುವ ಮಕ್ಕಳಿಗೆ ಎಲ್ಲವೂ ಅಲ್ಲೆಲ್ಲೋ ದೂರದಲ್ಲಿ ನಡೆದಿದೆ ಎಂಬಂತೆಯೇ ಭಾಸವಾಗುತ್ತದೆ. ಮಕ್ಕಳಲ್ಲಿರಬೇಕಾದ ವಯೋಸಹಜ ಅನುಕಂಪ, ಪ್ರೀತಿಯನುಭೂತಿ ಕಡಿಮೆಯಾಗಲು ಕಾರಣ ಅವರ ಸ್ಕ್ರೀನ್ ಸಮಯ.

ಜೆನ್ ಝೀಗಿಂತ ಮೊದಲಿನ ತಲೆಮಾರು ಪುಸ್ತಕಗಳೊಂದಿಗೆ ಬೆಳೆದರು. ಓದುವ ಪ್ರಕ್ರಿಯೆಯಲ್ಲಿ ಮನುಷ್ಯ ಸಹಜವಾದ ಅರಿಷಡ್ವರ್ಗಗಳನ್ನೂ ಅವರು ಅನುಭವಿಸುತ್ತಿದ್ದರು. ಅಂಥ ಭಾವಗಳೊಂದಿಗೆ ಗುರುತಿಸಿಕೊಳ್ಳುತ್ತಿದ್ದರು. ಪುಣ್ಯಕೋಟಿಯ ಕತೆ ಕೇಳಿ ಕಣ್ಣೀರಾಗುತ್ತಿದ್ದರು. ಇದೀಗ ಪುಣ್ಯಕೋಟಿಯ ಕತೆ ಹೇಳಿದರೆ ನೂರು ಪ್ರಶ್ನೆಗಳೇಳುತ್ತವೆ. ಯಾಕೆ, ಪುಣ್ಯಕೋಟಿಯ ಕರುವಿನ ತಂದೆ ಮಗುವಿನ ಜವಾಬ್ದಾರಿ ಹೊರಲಿಲ್ಲ ಎಂಬುದರಿಂದ ಆರಂಭವಾಗಿ ಹುಲಿ ಯಾಕೆ ಜಿಗಿದು ಪ್ರಾಣ ಬಿಟ್ಟಿತು, ತನ್ನ ಧರ್ಮವನ್ನು ತಾನು ಪಾಲಿಸದಿದ್ದರೆ ಕಾಡಿನ ಚಕ್ರ ಮುಂದುವರಿಯುವುದು ಹೇಗೆ? ಇಂಥ ತಾರ್ಕಿಕ ಪ್ರಶ್ನೆಗಳನ್ನು ಮುಂದಿರಿಸುತ್ತಾರೆ. ಈ ತರ್ಕವನ್ನು ಶ್ಲಾಘಿಸುತ್ತಲೇ, ಅವರಲ್ಲಿ ದಯೆ ಮತ್ತು ಜಗದ ಕಾರುಣ್ಯ ಮರೆಯಾಗುತ್ತಿರುವ ಬಗ್ಗೆ ನಾವೆಲ್ಲ ಕಾಳಜಿ ವಹಿಸಬೇಕಾಗಿದೆ.

ಪುಸ್ತಕ ಪ್ರೀತಿ ಬೆಳೆಸಲು ಇದೇ ಎಚ್ಚರಿಕೆ ಗಂಟೆ ಆಗಿದೆ. ಮಕ್ಕಳಲ್ಲಿ ಕಲ್ಪನಾಶಕ್ತಿ ಗರಿಗೆದರುವಂತೆ ಆಗಲು ಅವರು ಪದಗಳ ಲೋಕದಲ್ಲಿ ವಿಹರಿಸಬೇಕು. ಮೌನದಲ್ಲಿ ನಾದ ಕೇಳಬೇಕೆಂದರೆ ಅವರು ಅಕ್ಷರಗಳಲ್ಲಿ ತಮ್ಮ ಕಲ್ಪನಾ ವಿಲಾಸದ ಲೋಕವನ್ನು ನಿರ್ಮಿಸಬೇಕು. ಇಲ್ಲದಿದ್ದಲ್ಲಿ ಮಕ್ಕಳು ಮನುಷ್ಯರಾಗಲು ಇರಬೇಕಾಗಿರುವ ಲಲಿತಕಲೆಗಳಿಂದ ವಿಮುಖರಾಗುತ್ತಾರೆ. ಕೃತಕ ಬುದ್ಧಿಮತ್ತೆಯ ಈ ಕಾಲದಲ್ಲಿ ನೈಜ ಬುದ್ಧಿಮತ್ತೆ ಇಲ್ಲದಿದ್ದರೆ ಯಂತ್ರಗಳ ಕಾಲಾಳುಗಳಾಗಿ ಬದುಕಬೇಕಾಗುತ್ತದೆ.

ತಾರ್ಕಿಕ ಶಕ್ತಿಯಂತೆಯೇ, ಮಾನಸೋಲ್ಲಾಸ ನೀಡುವ ಕಲ್ಪನಾಶಕ್ತಿಯೂ ಅಷ್ಟೇ ಮುಖ್ಯ. ಸಣ್ಣಸಣ್ಣ ಸಂತೋಷಗಳನ್ನು ಅನುಭವಿಸಲು ಆನಂದಿಸುವ ಗುಣವೂ ಬೇಕು. ಇಂಥ ಗುಣಗಳು ಓದುವುದರಿಂದ ಬರಲು ಸಾಧ್ಯ. ಅಕ್ಷರಲೋಕದಿಂದ ಹೊರಗಿರುವವರು ಸಂತೋಷವಾಗಿಲ್ಲವೇ ಎಂಬ ಪ್ರಶ್ನೆ ಏಳಬಹುದು. ಆದರೆ ಅವರು ಡಿಜಿಟಲ್ ಲೋಕದಲ್ಲಿ ಕಳೆದುಹೋಗಿರಲಿಲ್ಲ.

ಡಿಜಿಟಲ್ ಲೋಕದ ಸ್ಕ್ರೀನ್ ಸಮಯ, ಮಕ್ಕಳಿಂದ ಈ ಗುಣಗಳನ್ನು ಕಸಿಯುತ್ತಿದೆ. ಮಕ್ಕಳಲ್ಲಿ ಹಿಂಸೆ ಹಾಗೂ ಪ್ರತಿರೋಧದ, ದ್ವೇಷದ ಮತ್ತು ಎಲ್ಲವನ್ನೂ ಪ್ರತಿಸ್ಪರ್ಧಿಯಂತೆ ಭಾವಿಸುವ ಗುಣಗಳು ಬೆಳೆಯುತ್ತಿವೆ. ಅಸುರನ ಗುಣಗಳನ್ನು ಬೆಳೆಸುವಲ್ಲಿ ಆನ್‌ಲೈನ್ ಗೇಮಿಂಗ್‌ಗಳು, ಅಪಹಾಸ್ಯದ ಮೀಮ್‌ಗಳು ಸಾಕಷ್ಟು ಮಹತ್ವದ ಪಾತ್ರವನ್ನೇ ವಹಿಸುತ್ತಿವೆ.

ಪುಸ್ತಕ ಪ್ರೀತಿಯನ್ನು ಬೆಳೆಸುವುದು ಕಷ್ಟವೇನಲ್ಲ. ನಿಮ್ಮ ದೈನಂದಿನ ಬದುಕಿನಲ್ಲಿ ಓದಲು, ನೀವು ಓದಲು, ಮಕ್ಕಳಿಗಾಗಿ ಓದಲು ಸಮಯವನ್ನು ಮೀಸಲಿಡಬೇಕು. ಮಕ್ಕಳು ಹೇಳಿದ್ದನ್ನು ಕೇಳುವುದಿಲ್ಲ. ನಮ್ಮನ್ನು ಅನುಸರಿಸಿ ಒಳಿತನ್ನು, ಕೆಡುಕನ್ನೂ ಕಲಿಯುತ್ತಾರೆ. ನಾವು ಓದದೆಯೇ ಮಕ್ಕಳಿಗೆ ಓದು ಎಂದು ಹೇಳುವುದು, ಯುಟ್ಯೂಬ್ ನೋಡಿ ಈಜು ಕಲಿತುಕೊ ಎಂದಷ್ಟೇ ನೀರಸವಾಗಿರುತ್ತದೆ. ಓದುವ ಸಮಯವನ್ನು ಆಸಕ್ತಿಕರವಾಗಿಸುವುದು, ಅವರ ಪ್ರಶ್ನೆಗಳಿಗೆ ಉತ್ತರಿಸುವುದು, ನಾವು ಪ್ರಶ್ನೆಗಳನ್ನು ಕೇಳಿ ಅವರಿಂದ ಉತ್ತರಪಡೆಯುವುದು, ಅವರು, ಅವರ ಉತ್ತರಗಳು ಮುಖ್ಯ ಎಂಬುದನ್ನು ಮನಗಾಣಿಸಿದರೆ ಪುಸ್ತಕ ಓದುವ ಸಮಯ ಅವರ ಇಷ್ಟದ ಸಮಯವಾಗುತ್ತದೆ. ಪಾಲಕರೊಂದಿಗಿನ ಬಾಂಧವ್ಯವೂ ಗಟ್ಟಿಯಾಗುತ್ತದೆ.

ಮನೆಯಲ್ಲೊಂದು ಪುಟ್ಟ ಗ್ರಂಥಾಲಯ, ಪುಸ್ತಕ ಕೊಂಡು ಓದುವ, ಕೊಡು ಕೊಳ್ಳುವಿಕೆಯ ಗುಂಪುಗಳೊಂದಿಗೆ ಗುರುತಿಸಿಕೊಳ್ಳುವುದು, ಪುಸ್ತಕಗಳೊಂದಿಗೆ ಸಾಮಾಜಿಕ ಬಾಂಧವ್ಯವನ್ನು ನಿರ್ಮಿಸುವ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮಕ್ಕಳಲ್ಲಿ ಓದುವ ಆಸಕ್ತಿ ಹುಟ್ಟಿಸುವುದಷ್ಟೇ ಅಲ್ಲ, ಹಿಡಿದಿಡುತ್ತದೆ.

ಆಳವಾದ ಓದು ಅವರ ಅಭಿವ್ಯಕ್ತಿ ಶಕ್ತಿಗೆ ಚುರುಕುತನ ನೀಡುತ್ತದೆ. ತೀಕ್ಷ್ಣವಾಗಿ ಪ್ರತಿಕ್ರಿಯಿಸುವುದು, ಸ್ಪಂದಿಸುವುದು ಎರಡೂ ಸಾಧ್ಯವಾಗುತ್ತದೆ. ಸರಿ–ತಪ್ಪುಗಳ ವಿವೇಚನೆ ಮೂಡುತ್ತದೆ. ಸ್ಕ್ರೀನ್ ಸಮಯದಲ್ಲಿ ಮಿಂದೇಳುವ ಮಕ್ಕಳು ತಾವು ಗೆಲ್ಲಬೇಕು, ತಾವೇ ಗೆಲ್ಲಬೇಕು ಎಂಬ ರೋಷ, ಛಲ ಮುಂತಾದ ನಕಾರಾತ್ಮಕ ಗುಣಗಳೊಂದಿಗೆ ಬೆಳೆಯುವ ಸಾಧ್ಯತೆ ಹೆಚ್ಚು. ಸ್ವಕೇಂದ್ರಿತ ವ್ಯಕ್ತಿಗಳಾಗುವ ಸಾಧ್ಯತೆಗಳು ಹೆಚ್ಚು. ಪುಸ್ತಕಗಳೊಂದಿಗೆ ಬೆಳೆಯುವ ಮಕ್ಕಳಲ್ಲಿ ಎಲ್ಲರ ಗೆಲುವನ್ನೂ ಆನಂದಿಸುವ ಗುಣ ತಾನಾಗಿಯೇ ಒಡಮೂಡುತ್ತದೆ. ಸಮಾಜಮುಖಿಯಾಗಿ ಬೆಳೆಯುತ್ತಾರೆ. ವಿಸ್ತಾರವಾದ ಓದು ಯಾವತ್ತಿಗೂ ಒಂದು ಆತ್ಮವಿಶ್ವಾಸವನ್ನು ನೀಡುತ್ತದೆ. ಬಾಂಧವ್ಯಗಳಲ್ಲಿ ಔದಾರ್ಯ ಮೂಡಿಸುತ್ತದೆ. ಮಕ್ಕಳು ಧಾರಾಳಿಯಾಗಿ ಬೆಳೆಯುತ್ತಾರೆ. ಪುಸ್ತಕ ಪ್ರೀತಿ ಬೆಳೆಸಲು ಇದು ಸಕಾಲ.

■ ರಶ್ಮಿ ಎಸ್




ವಿಜಯ